ಏರಿಕುಳಿತಿತು. ಕಲ್ಲು ಹೊಡೆದು ಇಳಿಸಲು ಮನಸ್ಸು ಬರಲಿಲ್ಲ. ಏನು ಮಾಡಬೇಕೆಂದು ತೋಚದೆ ಚಿಂತಾಕ್ರಾಂತರಾದರು. ಮಲ್ಲೇಶಿಗೂ ಯಾವುದೇ ಉಪಾಯ ಹೊಳೆಯಲಿಲ್ಲ.

ಐದಾರು ದಿನ, ವಾರ ಕಳೆಯಿತು. ಮರಿಯ ಮೈಯ್ಯೆಂಬುದು ಒಣಗಿ ಮೂಳೆಚಕ್ಕಳ ಮಾತ್ರ ಉಳಿದಿತ್ತು. ಆದರೂ ಅದನ್ನು ಬಿಸಾಡುತ್ತಿಲ್ಲ. ಕೋತಿ ಹಿಡಿಯುವವರನ್ನು ಕರೆಸಿ ಅದನ್ನು ಬಲೆಹಾಕಿ ಹಿಡಿಸಿದರು. ನಿತ್ರಾಣಗೊಂಡಿದ್ದ ಅದು ಸುಮ್ಮನೇ ಬಿದ್ದುಕೊಂಡಿತು. ಮುಂದಿನ ಎರಡೂ ಕೈಗಳನ್ನು ಬಿಡಿಸಲು ನೋಡಿದರು. ಕೋತಿ ಸತ್ತು ಗಂಟೆಗಳೇ ಉರುಳಿದ್ದರಿಂದ ಕಾಲುಗಳು ಬಗ್ಗಿಸಲಾರದಂತೆ ಸೆಟೆದುಕೊಂಡಿದ್ದವು. ಪಾವಂದಯ್ಯನ ಕಣ್ಣಲ್ಲಿ ಎರಡು ಹನಿ ನೀರು ಚಿಮ್ಮಿತು.

ಅದೇ ದಾರಿಯಲ್ಲಿ ಸಂಜೆಯ ವಾಕಿಂಗಿಗಾಗಿ ಬಂದ ಪ್ರೊ. ಕಾಳೇಶ್ ತೋಟದಲ್ಲಿ ನೆರೆದಿದ್ದ ಜನರನ್ನು ಕಂಡು, ತಮ್ಮ ಮಾತಿಗೆ ನೊಂದು ಪಾವಂದಯ್ಯನವರೇನಾದರೂ ಹೆಚ್ಚುಕಮ್ಮಿ ಮಾಡಿಕೊಂಡರೇನೋ ಎಂದು ಧಾವಿಸಿಬಂದರು. ಪಾವಂದಯ್ಯ, ಕಾಳೇಶರ ಕಣ್ಣಲ್ಲಿ ಕಣ್ಣಿಟ್ಟು ನೋಡದಾದರು. ಆದರೆ, ಅವರ ಕಣ್ಣಲ್ಲಿದ್ದ ಆರ್ದ್ರತೆಯನ್ನು ಗುರುತಿಸಿದ ಕುಲಪತಿ ಕಾಳೇಶರೇ, 'ಲೇಖಕನಾದವನಿಗೆ ಮೊದಲು ಹೆಂಗರುಳು ಇರಬೇಕು... ಅಂಥ ಮಾನವೀಯತೆಯ ಸೆಳಕು ಈಗ ನಿಮ್ಮಲ್ಲಿ ಅನುರಣಿಸಿದೆ... ಇನ್ನು ನೀವು ಲೇಖಕರಾಗಬಹುದು...' ಎಂದು ಬೆನ್ನುತಟ್ಟಿ ಅಪ್ಪಣೆ ಕೊಟ್ಟವರು, 'ಆದರೆ, ಕೋತಿಗೊಂದು ದೇವಸ್ಥಾನ ಕಟ್ಟಿಸಬಾರದಷ್ಟೇ' ಎಂದು ಚಟಾಕಿ ಹಾರಿಸಿದರು.

ಪಾವಂದಯ್ಯನವರಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯಲಿಲ್ಲ...

## ಕಂನಾಡಿಗಾ ನಾರಾಯಣ

ಶಿವಮೊಗ್ಗೆಯ ಸೆರಗಿನ ಗಾಡಿಕೊಪ್ಪದವರಾದ ಕಂನಾಡಿಗಾ, ಶಿವಮೊಗ್ಗ, ಭದ್ರಾವತಿ, ದಾವಣಗೆರೆ, ಮೈಸೂರು, ಹಾಗೂ ಅಣ್ಣಾಮಲೈಗಳಲ್ಲಿ ವಿದ್ಯಾಭ್ಯಾಸ ಪಡೆದಿದ್ದಾರೆ.
'ಮಂಡಲ', '...ಕಪ್ಪು ರಂಧ್ರ', 'ಹಸಿರು ಕಣ್ಣಿನ ಹುಡುಗಿ', 'ನರವಿಂಧ್ಯ', 'ತಲ್ಲಣದ ಆ ಕ್ಷಣ...', 'ಜೀ ಗಾಂಧಿ...' ಅವರ ಕಥಾ ಸಂಕಲನಗಳು. 'ತುಂಗೆಯ ತಳಮಳ', 'ಹಾಲು ಮಾರುವ ಹುಡುಗ', 'ಐ ಥಿಂಕ್ ಮೈಸ್ ಆರ್ ನೈಸ್' ಆಯ್ದ ಕಥೆಗಳ ಹಾಗೂ 'ಕಂನಾ ಕಥೆಗಳು', 'ಹಸಿರು ಬೆಟ್ಟ' ಈವರೆಗಿನ ಕತೆಗಳ ಸಂಕಲನಗಳಾಗಿವೆ.
'ಕಾಂಡ', 'ದ್ವಾಪರ', 'ಆಕಾಶ', 'ಭೂಮಿ' ಪ್ರಕಟಿತ ಕಾದಂಬರಿಗಳು. 'ಹುಲಿಯ ಹೆಜ್ಜೆ' (ಕಾದಂಬರಿ), 'ಆನೆ ಬಂತೊಂದಾನೆ', 'ನವಿಲು ಗರಿ' (ಕಥೆಗಳು)ಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. 'ರಾಜ್ಯ ಲೆಕ್ಕಪತ್ರ ಇಲಾಖೆ'ಯಲ್ಲಿ ಲೆಕ್ಕಅಧೀಕ್ಷಕರಾಗಿರುವ ಕಂನಾಡಿಗಾ ಪ್ರಸ್ತುತ 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'ದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಬರಹಗಳು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ.